**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.</u>**

**<u>ಸಿ.ಸಿ.ನಂ.118/2019</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಯಲ್ಲಪ್ಪ ದೇವಿಹೊಸೂರ | ಸಿಡಬ್ಲ್ಯೂ | 2 |
| ತಂದೆ ಹೆಸರು | ನಾಗಪ್ಪ | ಪಿಡಬ್ಲ್ಯೂ | 1 |
| ವಯಸ್ಸು | 39 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಬೆನಕನಹಳ್ಳಿ ತಾಃ ಹಾವೇರಿ | | |

**<u>ದಿಃ 25.09.2023 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.</u>**

**1).** ಆರೋಪಿತರು ಗೊತ್ತು, ಚಾ.ಸಾ-1 ಗೊತ್ತು. 1 ನೇ ಆರೋಪಿ ಚಾ.ಸಾ-1 ರವರಿಗೆ ಹೊಡೆದು ಗಲಾಟೆ ಮಾಡುತ್ತಿದ್ದ, ನಾವು ಪಂಚಾಯತಿ ಮಾಡಿ ರಾಜಿ ಮಾಡುತ್ತಿದ್ದೇವು. ಅದೇ ದಿನ ರಾತ್ರಿ ಹೊಡದು ಮನೆಯಿಂದ ಹೊರಗೆ ಹಾಕಿದ್ದ. ಚಾ.ಸಾ-1 ರವರು ಆಕೆಯ ಮಗಳೊಂದಿಗೆ ಪರಿಚಯದವರ ಮನೆಯಲ್ಲಿ ಇದ್ದರು. ದಿನಾಂಕಃ 25.06.2018 ರಂದು ಬೆನಕನಹಳ್ಳಿಯಲ್ಲಿ 1 ನೇ ಆರೋಪಿ 4 ನೇ ಆರೋಪಿಯನ್ನು ಎರಡನೇ ಮದುವೆ ಮಾಡಿಕೊಂಡಿದ್ದಾನೆ. ಜಗಳ ಆದ ಬಗ್ಗೆ ಪೊಲೀಸರು ಮನೆಯ ಬಳಿ ಬಂದು ಮದುವೆಯಾದ ಸ್ದಳಕ್ಕೂ ಪೊಲೀಸರು ಬಂದಿದ್ದರು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದುಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದಾಖಲೆಯು ಸ್ದಳ ಪಂಚನಾಮೆಯಾಗಿದ್ದು, ಅದನ್ನು ನಿ.ಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಎರಡು ಫೋಟೋಗಳನ್ನು ನಿ.ಪಿ-2 ಮತ್ತು ನಿ.ಪಿ-3 ಎಂದು ಗುರುತಿಸಲಾಯಿತು. ಪಂಚನಾಮೆ ಮಾಡಿದ ದಿನಾಂಕ ನೆನಪಿಲ್ಲ, ಆದರೆ 5 ವರ್ಷಗಳ ಹಿಂದೆ ಪಂಚನಾಮೆ ಮಾಡಿದ್ದಾರೆ. ಗಲಾಟೆಯಾದ ನಂತರ ಚಾ.ಸಾ-1 ರವರನ್ನು ಆಕೆಯ ಅಣ್ಣ ಕಲಗುಡ್ಡಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

**ಪಾಟೀ ಸವಾಲಿಗೆ ಶ್ರೀ.ಎಸ್.ಎನ್.ಹೆಚ್ ವಕೀಲರು ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗೆ ಮುಂದೂಡಲು ಯಾವುದೇ ಸಕಾರಣಗಳು ಇಲ್ಲದೇ ಇರುವದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.